ವಿಜಯ ಕರ್ನಾಟಕ

Comments Email Print

# ಸೈಬರ್ ನ್ಯಾಯ ವ್ಯವಸ್ಥೆ: ಕಡೆಯ ಸ್ಥಾನದಲ್ಲಿ ರಾಜ್ಯ!

**ವಿ. ಮುರಳೀಧರ್**, ಬೆಂಗಳೂರು

ಮಾಹಿತಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ರಾಜ್ಯ ಸೈಬರ್ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಕಟ್ಟ ಕಡೆಯ ಸ್ಥಾನದತ್ತ ಸಾಗಿದೆ!

ಹೌದು, ಮೊಬೈಲ್ ಕ್ರಾಂತಿಯಿಂದಾಗಿ ಮಾಹಿತಿ ತಂತ್ರಜ್ಞಾನ ಸಾಮಾನ್ಯ ಜನರ ಅಂಗೈ ತಲುಪಿದೆ. ಅದೇ ತಂತ್ರಜ್ಞಾನ ಬಳಸಿ ಬೆಳೆಯುತ್ತಿರುವ ಸೈಬರ್ ಅಪರಾಧ ಜಾಲದಲ್ಲಿ ಸಿಲುಕಿ ಅನ್ಯಾಯಕ್ಕೆ ಒಳಗಾಗುವವರು ನ್ಯಾಯ ಪಡೆಯಲು ಕಾನೂನಿ ನಲ್ಲಿ ಅವಕಾಶ ಕಲ್ಪಿಸಿದ್ದ ಬಾಗಿಲುಗಳು ಬಂದ್ ಆಗಿವೆ.

ಬ್ಯಾಂಕುಗಳು ಪರಿಚಯಿಸಿರುವ ಆನ್‌ಲೈನ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಮೊಬೈಲ್ ಬ್ಯಾಂಕಿಂಗ್ ಸೇವೆ ಪಡೆಯುತ್ತಿ ರುವ ಗ್ರಾಹಕರು ತಮ್ಮದಲ್ಲದ ತಪ್ಪಿಗೆ ಹಣ, ನ್ಯಾಯ ಪಡೆಯಬೇಕಾದರೆ ರಾಜ್ಯದಲ್ಲಿ ಅವಕಾಶಗಳೇ ಕಡಿಮೆ. ಹೀಗಾಗಿ ಐಟಿ ಕ್ಷೇತ್ರದಲ್ಲಿ ವಿಶ್ವ ಮಟ್ಟದಲ್ಲಿ ಹೆಸರು ಗಳಿಸಿರುವ ರಾಜ್ಯ ಸೈಬರ್ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಅಪಖ್ಯಾತಿಗೆ ಒಳಗಾಗುತ್ತಿದೆ. ಇದೇ ಸ್ಥಿತಿ ಮುಂದುವರಿದರೆ 'ಕರ್ನಾಟಕ ಸೈಬರ್ ಅಪರಾಧಗಳ ಸ್ವರ್ಗ' ಆಗಲಿದೆ ಎನ್ನುತ್ತಾರೆ ಸೈಬರ್ ಕಾನೂನು ತಜ್ಞರು.

**ನಿಯಮ**

ಬ್ಯಾಂಕುಗಳ ಭದ್ರತಾ ಲೋಪದಿಂದ ಗ್ರಾಹಕರು ಹಣ ಕಳೆದು ಕೊಂಡರೆ, ಕಾನೂನಾತ್ಮಕವಾಗಿ ಪರಿಹಾರ ಪಡೆಯಲು ಮಾಹಿತಿ, ತಂತ್ರಜ್ಞಾನ ಕಾಯಿದೆಯಲ್ಲಿ



" ರಾಜೇಂದ್ರ ಪ್ರಸಾದ್ ಯಾದವ್ ಮತ್ತು ಖಾಸಗಿ ಬ್ಯಾಂಕು ನಡುವಿನ ಪ್ರಕರಣದಲ್ಲಿ (ಸಂಖ್ಯೆ 17/2011) ರಾಜ್ಯದ ಅಡ್ಜುಡಿಕೇಟಿಂಗ್ ಅಧಿಕಾರಿ ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 43ನ್ನು ಉಲ್ಲೇಖಿಸಿ ಯಾವುದೇ ಕಂಪನಿಯನ್ನು ಅಪರಾಧಿ ಎಂದು ಪರಿಗಣಿಸುವಂತಿಲ್ಲ. ಯಾವುದೇ ಕಂಪನಿ ಈ ಸೆಕ್ಷನ್ ಅಡಿ ಅಪರಾಧ ದಾಖಲಿಸುವಂತಿಲ್ಲ ಎಂದು ತೀರ್ಪು ನೀಡಿದ್ದಾರೆ. ಆದರೆ,

ಅವಕಾಶ ಕಲ್ಪಿಸಲಾಗಿದೆ. ಇದರ ಪ್ರಕಾರ ಬ್ಯಾಂಕುಗಳ ಅಭದ್ರತೆಯಿಂದ 5 ಕೋಟಿ. ರೂ.ಗಿಂತ ಕಡಿಮೆ ಮೊತ್ತದ ಹಣ ಕಳೆದುಕೊಂಡ ಗ್ರಾಹಕರು/ ಸಂಸ್ಥೆಗಳು ಪರಿಹಾರ ಕೋರಿ ಆರ್‌ಬಿಐ ಓಂಬಡ್ಸ್‌ಮನ್ ಮೊರೆ ಹೋಗಬಹುದು. ಓಂಬಡ್ಸ್‌ಮನ್ ಅವರ ತೀರ್ಪಿನಿಂದ ನ್ಯಾಯ ಸಿಗದಿದ್ದಲ್ಲಿ ಮೇಲ್ಮನವಿ ಪ್ರಾಧಿಕಾರದ (ಮಾಹಿತಿ ತಂತ್ರಜ್ಞಾನ ವಿಭಾಗದ ಮುಖ್ಯಸ್ಥರು)ಮೊರೆ ಹೋಗಬಹುದು. ಅಲ್ಲೂ ಪರಿಹಾರ ಸಿಗದಿದ್ದರೆ ಹೊಸದಿಲ್ಲಿಯ 'ಅಪಿಲೆಂಟ್ ಟ್ರಿಬ್ಯುನಲ್' ಮೊರೆ ಹೋಗಬಹುದು.

**ಕಾನೂನು ಸಂಘರ್ಷ**

ಎಲ್ಲ ರಾಜ್ಯಗಳಲ್ಲೂ ಈ ವ್ಯವಸ್ಥೆ ಚಾಲ್ತಿಯಲ್ಲಿದೆ. ಆದರೆ, ರಾಜ್ಯದಲ್ಲಿ ಸೈಬರ್ ಅಪರಾಧ ದೂರಿನ ಸಂಬಂಧ ಅಡ್ಜುಡಿಕೇಟಿಂಗ್ ಅಧಿಕಾರಿ 2012ರಲ್ಲಿ ನೀಡಿರುವ ತೀರ್ಪು ಮಾಹಿತಿ ತಂತ್ರಜ್ಞಾನ ಕಾಯಿದೆ ಸೆಕ್ಷನ್ 43ರ ಬಗ್ಗೆ ಗೊಂದಲ ಮೂಡಿಸಿದ್ದು, ಇದು ಕಾನೂನು ಸಂಘರ್ಷಕ್ಕೆ ಎಡೆ ಮಾಡಿ ಕೊಟ್ಟಿದೆ. ರಾಜ್ಯದ ಅಡ್ಜುಡಿಕೇಟಿಂಗ್ ಅಧಿಕಾರಿ ಸೃಷ್ಟಿಸಿರುವ ಗೊಂದಲದ ಬಗ್ಗೆ ಕಾನೂನು ಸಮರ ಸಾರಿರುವ ಸೈಬರ್ ಕಾನೂನು ತಜ್ಞ ನಾ. ವಿಜಯಶಂಕರ್ ಈ ಕುರಿತು ವಿವರಿಸಿದ್ದು ಹೀಗೆ.

''ಗುಜರಾತ್ ಮೂಲದ ಪೆಟ್ರೋಸ್ಪೈಂಟೀಸ್ ಲಿ. ಸಮಾರು 59 ಲಕ್ಷ ರೂ. ಕಳೆದುಕೊಂಡ ಬಗ್ಗೆ ಖಾಸಗಿ ಬ್ಯಾಂಕ್ ವಿರುದ್ಧ ಸಲ್ಲಿಸಿದ್ದ ದೂರಿನ ಪ್ರಕರಣದಲ್ಲಿ ಅಡ್ಜುಡಿಕೇಟಿಂಗ್ ಅಧಿಕಾರಿ ತಪ್ಪು ತೀರ್ಪು ನೀಡಿ ಪ್ರಮಾದ ಎಸಗಿದ್ದರು. ಈ ಬಗ್ಗೆ ಕಾನೂನು ಇಲಾಖೆ ಗಮನಕ್ಕೆ ತಂದಾಗ ಅದನ್ನು ಸರಿಪಡಿಸಿ ಪ್ರಕರಣದ ವಿಚಾರಣೆಗೆ ಅವಕಾಶ ಕಲ್ಪಿಸಲಾಗಿತ್ತು. ಆರಂಭಕ್ಕೆ ಅವಕಾಶ ಸಿಗುತ್ತಿದ್ದಂತೆ ಖಾಸಗಿ ಬ್ಯಾಂಕ್ ಹೈಕೋರ್ಟ್ ಮೊರೆ ಹೋಗಿದ್ದರಿಂದ ಕಾನೂನು ಸಂಘರ್ಷ ನಿಂತಲ್ಲೇ ಇದೆ. ಇದನ್ನು ಪ್ರಶ್ನಿಸಿ ದಿಲ್ಲಿಯ ಅಪಿಲೆಂಟ್ ಟ್ರಿಬ್ಯುನಲ್‌ಗೆ ಹೋಗಲು ಅವಕಾಶ ಇದೆ. ಆದರೆ, 2011ರಿಂದ ಅಪಿಲೆಂಟ್ ಟ್ರಿಬ್ಯುನಲ್‌ಗೆ ನ್ಯಾಯಮೂರ್ತಿಗಳನ್ನೇ ನೇಮಕ ಮಾಡಿಲ್ಲ. ಇದು ನಮ್ಮ ವ್ಯವಸ್ಥೆಯ ದುರಂತ,'' ಎಂದು ಅಸಮಾಧಾನ ವ್ಯಕ್ತಪಡಿಸುತ್ತಾರೆ.

''ಐಟಿ ಕಾಯಿದೆ ಸೆಕ್ಷನ್ 43ರ ಬಗ್ಗೆ ಅಡ್ಜುಡಿಕೇಟಿಂಗ್ ಅಧಿಕಾರಿ ಸೃಷ್ಟಿಸಿರುವ ಗೊಂದಲ ಪರಿಹರಿಸದಿದ್ದರೆ, ರಾಜ್ಯದಲ್ಲಿ ತಮ್ಮದಲ್ಲದ ತಪ್ಪಿನಿಂದ ಆಗುವ ಸೈಬರ್ ಅಪರಾಧದಲ್ಲಿ ಶೇ. 90 ರಷ್ಟು ಮಂದಿ ಪರಿಹಾರ ಪಡೆಯಲಾಗದು. ಗೊಂದಲ ಪರಿಹರಿಸಿಕೊಳ್ಳುವ ನಿಟ್ಟಿನಲ್ಲಿ ಈ ಹಿಂದಿನ ಮೂರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೆ, ಪ್ರಯೋಜನ ಆಗಿಲ್ಲ. ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಕಳೆದ ಅ. 15 ರಂದು ಸವಿವರ ಪತ್ರ ಬರೆದು ಸೆಕ್ಷನ್ 43ರ ಬಗೆಗಿನ ಗೊಂದಲದ ಬಗ್ಗೆ ಮುಖ್ಯ ನ್ಯಾಯಮೂರ್ತಿಗಳ ಅಭಿಪ್ರಾಯ ಪಡೆದು ಪರಿಹಾರ ಕಂಡುಕೊಳ್ಳುವ ಬಗ್ಗೆ ಮನವಿ ಮಾಡಿದ್ದೇನೆ,'' ಎನ್ನುತ್ತಾರೆ ಅವರು.

**ಪ್ರಕರಣಗಳಲ್ಲಿ ಚೆನ್ನೈ, ಮುಂಬೈ ಅಡ್ಜುಡಿಕೇಟಿಂಗ್ ಅಧಿಕಾರಿಗಳು ತೀರ್ಪು ನೀಡಿ, ಸೈಬರ್ ಅಪರಾಧದಿಂದ ಹಣ ಕಳೆದುಕೊಂಡ ಕಂಪನಿಗಳಿಗೆ ಸಂಬಂಧ ಪಟ್ಟ ಬ್ಯಾಂಕುಗಳಿಂದ ಪರಿಹಾರ ಕೊಡಿಸಿದ್ದಾರೆ. ಇದನ್ನು ಸರಕಾರ ಗಂಭೀರವಾಗಿ ಪರಿಗಣಿಸಿ ಗೊಂದಲ ಪರಿಹರಿಸಬೇಕು. ತಡವಾದಲ್ಲಿ ಜನ ಸಾಮಾನ್ಯರು ದೊಡ್ಡ ಪ್ರಮಾಣದಲ್ಲಿ ದಂಡ ತೆತ್ತುವುದರಲ್ಲಿ ಅಚ್ಚರಿ ಪಡಬೇಕಿಲ್ಲ.''**

**– ನಾ. ವಿಜಯಶಂಕರ್,** ನಿರ್ದೇಶಕರು, ಸೈಬರ್ ಲಾ ಕಾಲೇಜು,